# ಸರ್ವಜ್ಞನೆಂದರೆ...

ಸರ್ವಜ್ಞ ಎಂಬ ಪದವೇ ಎಲ್ಲವನು ಅರಿತವರು, ಬಲ್ಲವರು ಎಂಬ ಅರ್ಥವನ್ನು ಸೂಚಿಸುವಂತದ್ದು. ಸರ್ವಜ್ಞನನ್ನು ಕುರಿತಂತೆ 'ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಮುಟ್ಟದ ವಿಷಯವಿಲ್ಲ' ಎಂಬ ಗಾದೆ ಮಾತು ಹುಟ್ಟಿಕೊಂಡಿದೆ. ಕೃಷಿಕರು ಸಾಕಿದ ಮೇಕೆ– ಕುರಿ ಮೊದಲಾದ ಪ್ರಾಣಿಗಳು ತಿಂದಷ್ಟೂ, ಮೈ ಕೈ ತುಂಬಿಕೊಂಡಷ್ಟೂ ಲಾಭ ಸಾಕಿದವನಿಗೆ. ತನ್ನನ್ನು ಕೊಂದು ತಿನ್ನುತ್ತಾರೆ ಎಂಬ ಅರಿವಿಲ್ಲದ ಅದನ್ನೇ ಕುರಿತು ಬಸವಣ್ಣ 'ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣವ ಮೇಯ್ದಿತ್ತು' ಎನ್ನುತ್ತಾನೆ. ಈ ರೀತಿ ಮುಗ್ಧವಾಗಿರುವ ಅದನ್ನು ಕೊಂದವರು ಉಳಿಯುತ್ತಾರೆಯೇ ಎಂದು ಬಸವಣ್ಣ ಪ್ರಶ್ನಿಸುತ್ತಾನೆ.

ಸರ್ವಜ್ಞ ಗರ್ವದಿಂದಾದವನಲ್ಲ. ಸರ್ವರೊಳಗೆ ಒಂದೊಂದು ನುಡಿಕಲಿತು ವಿದ್ಯೆಯ ಪರ್ವತವೇ ಆದವನು. ಸುಮಾರು ಹದಿನಾರು ಹದಿನೇಳನೇ ಶತಮಾನಗಳ ನಡುವಿನಲ್ಲಿ ಜೀವಿಸಿದ್ದ ಸರ್ವಜ್ಞನ ಹುಟ್ಟೂರನ್ನು ಹಾವೇರಿ ಜಿಲ್ಲೆಯ ಅಂಬಲೂರು ಎಂದು ಗುರುತಿಸಲಾಗುತ್ತದೆ. ಅವನ ಧರ್ಮದ ಬಗೆಗಿನ ಚರ್ಚೆಗಳು ವೀರಶೈವ ಮತ್ತು ಜೈನ ಧರ್ಮದ ನಡುವೆ ನಡೆದರೂ ಅವನ ತ್ರಿಪದಿಗಳು ಜಾತಿ–ಮತಗಳೆಂಬ ಪಂಥದಿಂದಾಚೆ ನಿಂತುಬಿಡುತ್ತವೆ. ನಿಜಾರ್ಥದಲ್ಲಿ ಎಲ್ಲ ಮರಗಳ, ಗಿಡಗಳ ಸೊಪ್ಪಿನ ಸಾರವೆ ಅವನಾಗಿದ್ದ. ಎಲ್ಲ ಧರ್ಮದ ಒಳಗೆ ಮತ್ತು ಹೊರಗೆ ನಿಲ್ಲಬಲ್ಲವನಾಗಿದ್ದ ಸರ್ವಜ್ಞನ ದಾರಿ ಆನೆ ನಡೆದದ್ದೇ ದಾರಿ ಎನ್ನುವಂತಿತ್ತು. ಅವನೇ ತನ್ನ ತ್ರಿಪದಿಗಳಲ್ಲಿ ಅಂದು ಕೈಲಾಸದಲ್ಲಿ ಪುಷ್ಪದತ್ತನಾಗಿದ್ದೆ, ಮುಂದೆ ವರರುಚಿಯಾಗಿ ಸರ್ವಜ್ಞನೆನಿಸಿಕೊಂಡೆ ಎಂದು ಹೇಳಿಕೊಂಡಿದ್ದಾನೆ. ಮಾಸೂರಿನ ಅಕ್ಕಮಲ್ಲಮ್ಮನೆಂಬ ಗೃಹಿಣಿ ತನ್ನ ಗಂಡನಾದ ಬಸವರಸನಲ್ಲಿ ತಮಗೆ ಮಕ್ಕಳಿಲ್ಲ ಎಂದ ದುಃಖಿಸಿದಾಗ ಅವನು ದೈವದ ಕರುಣೆ ಪಡೆಯಲು ಕಾಶಿಗೆ ಹೋಗುತ್ತಾನೆ. ಬ್ರಾಹ್ಮಣನಾದ ಈತ ದೈವದಿಂದ ವರ ಪಡೆದು ತನ್ನ ಊರಿಗೆ ಹಿಂದಿರುಗುತ್ತಿದ್ದಾಗ ಮಳೆಯ ಕಾರಣದಿಂದಾಗಿ ಅಂಬಲೂರಿನ ಕುಂಬಾರಸಾಲೆಯಲ್ಲಿ ತಂಗುತ್ತಾನೆ. ಕುಂಬಾರಗಿತ್ತಿ ಮಾಳಿಯ ಸಂಗವಾಗುತ್ತದೆ. ಈ ಸಂಗದಿಂದ ಜನಿಸಿದವನು ನಾನು ಎಂದು ಸರ್ವಜ್ಞ ಹೇಳಿಕೊಂಡಿದ್ದಾನೆ. ಇನ್ನೊಂದು ಕಡೆ 'ತಂದೆ ಹಾರುವನಲ್ಲ, ತಾಯಿ ಮಾಳಿಯು ಅಲ್ಲ, ಚಂದ್ರಶೇಖರನ ವರಪುತ್ರ ನಾನು' ಎಂದುಹೇಳಿಕೊಂಡಿದ್ದಾನೆ. ತಂದೆ ಮಾಳನೂ, ತಾಯಿ ಮಾಳಿಯೂ ಮುಂದೊಂದು ದಿನ ಅವನನ್ನು ಕೂಳಿತ್ತು ಸಲಹಿದ ಹೆಮ್ಮೆಯಿಂದ 'ನೀ ಆರ ಮಗನೆಂದು' ಕೇಳಲು ತಾನು ಶಿವನ ಮಗನೆನ್ನುತ್ತಾನೆ. ಸಿಟ್ಟಿಗೆದ್ದು ಅವರು ತನ್ನನ್ನು ಹೊರಗೆ ಹಾಕಿದ್ದರಿಂದ ತಾನು ಲೋಕಸಂಚಾರಿಯಾದೆ ಎಂದು ತನ್ನ ಬಗ್ಗೆ ಹೇಳಿಕೊಳ್ಳುತ್ತಾನೆ.

ಹೀಗೆ ಮನೆಯೆಂಬ ಆವರಣದಿಂದ ಚಿಕ್ಕ ವಯಸ್ಸಿನಲ್ಲೇ ಹೊರಬಂದ ಅವನ ಮುಂದಿನ ಬದುಕಿನ ವಿವರಗಳು ಲಭ್ಯವಾಗುವುದಿಲ್ಲ. ದಾರಿ ಕರೆದುಕೊಂಡು ಹೋದ ಕಡೆ ಅವನು ನಿರಂತರವಾಗಿ ಚಲಿಸುತ್ತಾ ಹೋದ. ಎಡಗೈಯಲ್ಲಿ ಕೋಲು, ಬಲಗೈಯಲ್ಲಿ ಭಿಕ್ಷಾಪಾತ್ರ, ಬೋಳುತಲೆ, ಹೊದ್ದ ಕರಿಕಂಬಳಿಯೊಂದಿಗೆ ಎಲ್ಲರೊಡನೆ ಬೆರೆಯುತ್ತಾ ಹೋದ. ಗಿಡಗಿಡದಿಂದ ಸೊಪ್ಪು ಮೇಯುವ ಆಡಿನ ತರದಲ್ಲಿ ಊರಿಂದ ಊರಿಗೆ, ಜನರಿಂದ ಜನರೆಡೆಗೆ ಚಲಿಸುತ್ತಾ ಹೋದ. ಅವನ ತ್ರಿಪದಿಗಳು ಅವನು ಕಂಡುಕೊಂಡ ಸಾರ್ವಕಾಲಿಕ ಸತ್ಯವನ್ನು ಸಂದರ್ಭಾನುಸಾರವಾಗಿ ಬಿಂಬಿಸುತ್ತವೆ. ಈ ತ್ರಿಪದಿಗಳು ಸಮಾಜಕ್ಕೆ ಚಿಕಿತ್ಸಕ ರೂಪದಲ್ಲಿದ್ದು ಕುಂದುಕೊರತೆಗಳನ್ನು ಎತ್ತಿ ಹೇಳುವಂತಿವೆ. ಅವನು ಮಾತನಾಡದ ವಿಷಯಗಳೇ ಇಲ್ಲ. ದೇವರು, ಸಮಾಜ, ನ್ಯಾಯ ನೀತಿ, ಅರ್ಥ, ಕಾಮ ಮೋಕ್ಷ ಮುಂತಾದ ಸಂಗತಿಗಳ ಬಗ್ಗೆ ನಿರ್ಭಿಡೆಯಿಂದ ಚಿಂತಿಸುತ್ತವೆ.

ವಚನ ಸಾಹಿತ್ಯದಲ್ಲಿರುವಂತೆ ಅಷ್ಟಾವರಣಗಳ ಬಗ್ಗೆ, ಜ್ಞಾನ, ಯೋಗ, ಪರಸ್ತ್ರೀಸಂಗ, ಜಾತಿವ್ಯವಸ್ಥೆ, ಬಡತನ ಸಿರಿತನ ಹೀಗೆ ಸಮಾಜವನ್ನು ಕಾಡುವ ಎಲ್ಲ ಸಂಗತಿಗಳ ಬಗ್ಗೆ ಮಾತನಾಡಿದ್ದಾನೆ. ಭಕ್ತಿಯ ಬಗ್ಗೆ ಅವನದು ಉದಾತ್ತವಾದ ನಿಲುವು. ವಚನಕಾರರ 'ದೇಹವೇ ದೇಗುಲ' ಎಂಬ ಸಿದ್ಧಾಂತಕ್ಕೆ ಹತ್ತಿರವಾದದ್ದು. 'ದೇಹ ದೇವಾಲಯವು, ಜೀವವೇ ಶಿವಲಿಂಗ, ಬಾಹ್ಯಂಗಳಳಿದು ಭಜಿಪಂಗೆ ಮುಕ್ತಿ ಸಂದೇಹವಿಲ್ಲೆಂದು' ಅವನ ಭಾವನೆ. ಮನೆಯಲ್ಲಿದ್ದರೇನು, ಮಠದಲ್ಲಿದ್ದರೇನು, ಅವನ ಸ್ಮರಣೆಯಿಲ್ಲದಿದ್ದರೆ ಬೆಟ್ಟದ ತುದಿಯಲ್ಲಿ ನಿಂತು ತಪಸ್ಸು ಮಾಡಿದರೂ ಫಲ ಲಭಿಸದು ಎನ್ನುವುದು ಅವನು ಕಂಡುಕೊಂಡ ಸತ್ಯವಾಗಿತ್ತು.

ದೇವರು ಒಳಗಿರುವನೋ, ಹೊರಗಿರುವನೋ ಎಂಬ ಚರ್ಚೆಗೆ ಅವರವರು ಕಂಡುಕೊಂಡಂತೆ ಕಾಣ್ಕೆ ಎನ್ನುತ್ತಾನೆ. 'ಅಲ್ಲಿಪ್ಪನಿಲ್ಲಿಪ್ಪ, ನೆಲ್ಲಿಪ್ಪನೆನಬೇಡ, ಕಲ್ಲಿನಂತಿಪ್ಪ ಮಾನವನ ಮನಕರಗೆ, ಅಲ್ಲಿಪ್ಪ ನೋಡ ಸರ್ವಜ್ಞ' ಇನ್ನೂ ಮುಂದುವರೆದು ಅವರವರ ನಂಬಿಕೆಯಂತೆ ಅವರವರ ದೈವ ಎನ್ನುತ್ತಾನೆ. 'ಸಣ್ಣನೆಯ ಮಳಲೊಳಗೆ, ನುಣ್ಣನೆಯ ಶಿಲೆಯೊಳಗೆ, ಬಣ್ಣಿಸುತ ಬರೆದ ಪಟದೊಳಗೆ ಇರುವಾತ, ತನ್ನೊಳಗೆ ಇರನೆ? ಸರ್ವಜ್ಞ' ಎಂಬುದು ಅವನ ದೈವದ ಕುರಿತ ನಿಲುವಾಗಿದೆ.

ಗುರು ಶಿಷ್ಯರ ಬಗ್ಗೆ ಅವನ ಚಿಂತನೆಗಳು ಉದಾರವಾಗಿವೆ. ಕೊಡುವ ಗುರು, ಪಡೆವ ಶಿಷ್ಯ ಈ ಕೊಳುಕೊಡುವ ಸಂಬಂಧದ ಬಗ್ಗೆ ಅವನ ಚಿಂತನೆಗಳು ಪಾರದರ್ಶಕವಾಗಿವೆ. ಪರಸ್ಪರ ಸಂವಾದ ಸಾಧ್ಯವಾಗುವ ರೀತಿಯಲ್ಲಿ ಆ ಸಂಬಂಧವಿರಬೇಕೆಂಬುದು ಅವನ ನಿಲುವು. 'ಕಟ್ಟಿಗೆಗಳೆರಡನ್ನು, ಕಟ್ಟಿದರೇನಹುದು ಗಟ್ಟಿಯಾಗಿ, ಮಥಿಸಲ್ಕೆ ಬೇಗೆಯದು ಬೆಟ್ಟ ಕೊಂಡಂತೆ ಸರ್ವಜ್ಞ'. ಕೊಡುವ ಗುರು, ಪಡೆಯುವ ಶಿಷ್ಯ ಇಬ್ಬರೂ ಪರಸ್ಪರ ಪ್ರತಿಭೆಯಲ್ಲಿ ಪೂರಕವಾಗಿರಬೇಕು. ಇಬ್ಬರೂ ಜ್ಞಾನವೆಂಬ ಬೆಂಕಿಯಲ್ಲಿ ಜ್ವಲಿಸುವಂತಿರಬೇಕು. ಮಿಂದು ಹೊರಬರುವಂತಿರಬೇಕು. ಇಲ್ಲದಿದ್ದರೆ ಅದು ಬರಿಯ ಜ್ವಾಲೆಯೊಂದು ಜ್ವಲಿಸಿ ನಂದಿಹೋದಂತೆ ವ್ಯರ್ಥಕ್ರಿಯೆಯಾಗುತ್ತದೆ. ನಿಜವಾದ ಗುರುವಿಗೆ ತನ್ನ ಶಿಷ್ಯನಿಗೆ ಏನು ಹೇಳಬೇಕು ಹೇಗೆ ಹೇಳಬೇಕು ಎಂಬುದರ ಮುಂದಾಲೋಚನೆಯಿರುತ್ತದೆ. ತನ್ನ ಗುರುವಿನ ಸಾಮರ್ಥ್ಯದ ಬಗ್ಗೆ ಶಿಷ್ಯನಿಗೂ ನಂಬಿಕೆಯಿರಬೇಕು. ಅಪನಂಬಿಕೆಯಿದ್ದಲ್ಲಿ ಜ್ಞಾನ ದಕ್ಕದು. 'ಕೇಳದಲೆ ಗುರುವು ತಾ, ಹೇಳುವನು ನಿನಗೊಂದ, ಕೇಳಿದರೆ ಬೇರೆ ಹೇಳುವನ ನೆರಮಾತು ಕೇಳುವವನೆಗ್ಗ ಸರ್ವಜ್ಞ'. ಒಬ್ಬ ಗುರುವನ್ನು ನಂಬಿ ನಚ್ಚಿದ ಮೇಲೆ ಇನ್ನೊಬ್ಬರನ್ನು ಆಶ್ರಯಿಸಬಾರದು. ಎರಡು ದೋಣಿಯಲಿ ಪಯಣ ಮಾಡುವವನು ಎಗ್ಗನೇ ಸರಿ ಎಂದು ಸರ್ವಜ್ಞ ಟೀಕಿಸುತ್ತಾನೆ.

ಸರ್ವಜ್ಞ ಹಿಂಡನಗಲಿದ ಗಜವಾದ್ದರಿಂದ ಅವನ ನಡೆ–ನುಡಿಗೆ ಅವನೇ ಯಜಮಾನನಾಗಿದ್ದ. ಯಾರನ್ನಾದರೂ ಮೆಚ್ಚಿಸಬೇಕೆಂಬ ಉದ್ದೇಶವಿಲ್ಲದ ಅವನು ಆನು ಕಂಡಂತೆ ಹಾಡುವೆ ಎಂದು ಬದುಕಿದವನು. ಚಿಕ್ಕಚಿಕ್ಕ ಮೂರುಸಾಲಿನ ತ್ರಿಪದಿಗಳಲ್ಲಿ ಅವನು ಹೇಳುವ ಲೋಕಾನುಭವ ಎಲ್ಲಾಕಾಲಕ್ಕೂ ಸಲ್ಲುವಂತದ್ದೇ ಆಗಿದೆ.

■ **ಅಮೃತಮತಿ**

## ಮಾತೇ ಮುತ್ತು

- ಆಸೆಗೆ ಜವಾಬ್ದಾರಿ ಇಲ್ಲ.

  —ಇ.ಬಿ. ಲಿಟ್ಟನ್

- ಸೋಮಾರಿಗಳೆದುರು ಕೆಲಸ ಕಾರ್ಯದ ನುಡಿಯನಾಡಿದರೆ ಅವರ ಕಿವಿಗಳಿಗೆ ಕಿವುಡು, ನುಡಿಯುವವ ಅಧಿಕ ಪ್ರಸಂಗಿ ಅವರ ದೃಷ್ಟಿಯಲ್ಲಿ.

  —ಎಸ್.ವಿ. ರಂಗಣ್ಣ

- ಗಂಡಸು ಒಬ್ಬಳನ್ನು ಪ್ರೀತಿಸಿದ ನಂತರ ಅವಳಿಗಾಗಿ ಏನನ್ನು ಬೇಕಾದರೂ ಮಾಡುತ್ತಾನೆ. ಅವಳನ್ನು ಪ್ರೀತಿಸುವುದು ಒಂದನ್ನು ಬಿಟ್ಟು.

  —ಆಸ್ಕರ್ ವೈಲ್ಡ್

- ಜೀವನದ ಗುರಿ ಸಂತಸ ಮಾತ್ರವಲ್ಲ, ನಮ್ಮನ್ನು ಇತರರನ್ನೂ ಉತ್ತಮರನ್ನಾಗಿಸುವುದು.

  —ಮ್ಯಾಕ್ಸಿಮ್

- ಕಾಲ ದೃಢವಾದ ಮಿತ್ರನಾಗಿಯೂ, ರೋಗವನ್ನು ಗುಣಪಡಿಸುವ ವೈದ್ಯನಾಗಿಯೂ ಇದೆ.

  —ಮಹಾತ್ಮ ಗಾಂಧಿ